**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**

**ಸಹ ಸಂಶೋಧನಾ ನಿರ್ದೇಶಕರು**

**ಸಂಶೋಧನಾ ನಿರ್ದೇಶಕರ ಕಛೇರಿ**

**ಜಿಕೆವಿಕೆ, ಬೆಂಗಳೂರು-560065**

ಸಂಖ್ಯೆ: ಸಂ.ನಿ./ದಾಸ್ತಾವೇಜು/ವಾ.ಕಾ./2022-23 ದಿನಾಂಕ: 20.02.2023

**ಸುತ್ತೋಲೆ**

**ವಿಷಯ:** 2023ನೇ ಸಾಲಿನ ವಲಯ-5ರ, **ವಲಯ ಸಂಶೋಧನಾ ಹಾಗೂ ವಿಸ್ತರಣಾ ಕಾರ್ಯಕ್ರಮಗಳ ವಾರ್ಷಿಕ ಕಾರ್ಯಾಗಾರ** ಆಯೋಜಿಸುವ ಕುರಿತು

**ಉಲ್ಲೇಖ:** ಸಂಶೋಧನಾ ನಿರ್ದೇಶಕರ ಸುತ್ತೋಲೆ ಸಂಖ್ಯೆ:ಸಂ.ನಿ./ದಸ್ತಾವೇಜು/ವಾ.ಕಾ/179/2022-23 ದಿನಾಂಕ: 30.01.2023

* * * *

ವಲಯ 5 ರ (ಪೂರ್ವ ಒಣ ವಲಯ) ವಲಯ ಸಂಶೋಧನಾ ಹಾಗೂ ವಿಸ್ತರಣಾ ಕಾರ್ಯಕ್ರಮಗಳ ವಾರ್ಷಿಕ ಕಾರ್ಯಾಗಾರವನ್ನು **11, 12 ಮತ್ತು 13ನೇ ಏಪ್ರಿಲ್, 2023** ರಂದು **ಬೆಂಗಳೂರಿನ ಜಿ.ಕೆ.ವಿ.ಕೆ. ಆವರಣದ ಕೃಷಿ ಮಹಾವಿದ್ಯಾಲಯದ ಉತ್ತರ ಬ್ಲಾಕ್‌ನ ಸಭಾಂಗಣದಲ್ಲಿ** ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದ್ದು, ಸದರಿ ಕಾರ್ಯಾಗಾರದಲ್ಲಿ ಕೆಳಕಂಡ ಅಂಶಗಳನ್ನು ಪರಿಶೀಲಿಸಿ, ಪರಿಗಣಿಸಿ ಮತ್ತು ಅನುಮೋದಿಸಲು ನಿರ್ಧರಿಸಲಾಗುತ್ತದೆ.

- ಕ್ಷೇತ್ರವಾರು ಸಮಸ್ಯೆಗಳು ಮತ್ತು 2022-23ರ ಕ್ಷೇತ್ರ ಪ್ರಯೋಗಗಳ ಫಲಿತಾಂಶಗಳು
- ಬಿಡುಗಡೆಗೆ ಶಿಫಾರಸ್ಸು ಮಾಡಲಾದ ನೂತನ ತಳಿಗಳು ಮತ್ತು ವಿವರ
- ಆಧುನಿಕ ಬೇಸಾಯ ಪದ್ಧತಿಗಳ ಕೈಪಿಡಿಗೆ (PoP) ಸೇರ್ಪಡಿಸಲು ಅಂಗೀಕರಿಸಲಾದ ನೂತನ ತಂತ್ರಜ್ಞಾನಗಳು ಹಾಗೂ ವಿವರ
- ತಂತ್ರಜ್ಞಾನಗಳ ವಾಣಿಜ್ಯೀಕರಣ (Commercialization) ಹಾಗೂ ಹಕ್ಕುಸ್ವಾಮ್ಯಪತ್ರಕ್ಕಾಗಿ (Patents) ಸಲ್ಲಿಸುವ ಪ್ರಸ್ತಾವನೆಗಳು
- 2022-23ರಲ್ಲಿ ಕೈಗೊಂಡ ಸಂಶೋಧನಾ ಪ್ರಯೋಗಗಳ ಫಲಿತಾಂಶಗಳು
- 2023-24ನೇ ಸಾಲಿಗೆ ಹೊಸ ಕ್ಷೇತ್ರ ಪ್ರಯೋಗಗಳ ಮತ್ತು ಬಹು ಕ್ಷೇತ್ರ ಪ್ರಯೋಗಗಳ (MLT) ಪ್ರಸ್ತಾವನೆಗಳು
- 2023-24ರ ನೂತನ ತಾಂತ್ರಿಕ ಕಾರ್ಯಕ್ರಮಗಳ ಪ್ರಸ್ತಾವನೆಗಳು
- ಉದ್ಭವಿತ ಸಮಸ್ಯೆಗಳು (Emerging Issues) ಮತ್ತು ಸಂಶೋಧನೆಯ ನೂತನ ಆಯಾಮಗಳು (Thrust Areas)

ಸಂಬಂಧಪಟ್ಟ ಎಲ್ಲಾ ವಿಜ್ಞಾನಿಗಳು / ಪ್ರಾಯೋಜನಾ ಮುಖ್ಯಸ್ಥರು / ಸಹ ವಿಸ್ತರಣಾ ನಿರ್ದೇಶಕರು / ವಿಭಾಗಗಳ ವಿ.ವಿ ಮುಖ್ಯಸ್ಥರು / ಇಲಾಖಾ ಮುಖ್ಯಸ್ಥರು / ಕೃಷಿ ವಿಜ್ಞಾನ ಕೇಂದ್ರಗಳ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು / ಹಿರಿಯ ಕ್ಷೇತ್ರ ಅಧೀಕ್ಷಕರು / ಕ್ಷೇತ್ರ ಅಧೀಕ್ಷಕರು ಮತ್ತು ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ವಲಯ-5 ರ ಕಾರ್ಯಾಗಾರಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕ್ರೂಢೀಕರಿಸಿದ ವರದಿಯನ್ನು ಸಿದ್ಧಪಡಿಸುವಂತೆ ಅನುವಾಗಲು ತಾವುಗಳು **ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ** ಮುದ್ರಿತ ಮತ್ತು ವಿದ್ಯುನ್ಮಾನ ಪ್ರತಿಯನ್ನು (Hard & Soft Copy) ಲಗತ್ತಿಸಲಾದ ನಮೂನೆಯಲ್ಲಿ ದಿನಾಂಕ: **10.03.2023** ರೊಳಗೆ ಸಹ ಸಂಶೋಧನಾ ನಿರ್ದೇಶಕರ ಕಛೇರಿಗೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

- ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗದ ಮುಖ್ಯಸ್ಥರುಗಳು ವಿಭಾಗದಲ್ಲಿ ಅನುಷ್ಠಾನಗೊಂಡಿರುವ ಎಲ್ಲಾ ಸಂಶೋಧನಾ ಪ್ರಾಯೋಜನೆಗಳ ಫಲಿತಾಂಶ ಮತ್ತು ಸ್ನಾತಕೋತ್ತರ ಸಂಶೋಧನೆಯ ಪ್ರಮುಖ ಫಲಿತಾಂಶಗಳ ಸಂಕ್ಷಿಪ್ತ ವರದಿಯನ್ನು ಶ್ರವಣ ದೃಶ್ಯ ಮಾಹಿತಿ ರೂಪದಲ್ಲಿ (ಪಿಪಿಟಿ) ಮಂಡಿಸಲು ಕೋರಲಾಗಿದೆ. (ವಲಯ-5 ಕ್ಕೆ ಸಂಬಂಧಿಸಿದ ವರದಿಯನ್ನು ಮಾತ್ರ ಕಳುಹಿಸತಕ್ಕದ್ದು).

- 2023–24 ನೇ ಸಾಲಿನ ತಾಂತ್ರಿಕ ಕಾರ್ಯಕ್ರಮಗಳನ್ನು ರೂಪಿಸುವಾಗ ವಿಶ್ವವಿದ್ಯಾನಿಲಯದ ವಿಭಾಗ ಮುಖ್ಯಸ್ಥರುಗಳು ಕೃಷಿ ಕ್ಷೇತ್ರದಲ್ಲಿ ಉದ್ಭವಿಸಿರುವ ಪ್ರಸ್ತುತ ಸಮಸ್ಯೆಗಳಿಗನುಗುಣವಾಗಿ ಮತ್ತು ಪ್ರಮುಖ ಸಮಸ್ಯೆಗಳನ್ನು ಪರಿಹರಿಸಲು ಕಾರ್ಯಕ್ರಮವನ್ನು ರೂಪಿಸಲು ಕೋರಲಾಗಿದೆ. ಆಯಾ ವಿಭಾಗದ ವಾರ್ಷಿಕ ತಾಂತ್ರಿಕ ಸಭೆಗಳಲ್ಲಿ ನಿರ್ಣಯಿಸಿದ ನೂತನ ತಾಂತ್ರಿಕ ಕಾರ್ಯಕ್ರಮಗಳು, ಮುಂದುವರೆಯುವ ಮತ್ತು ಮುಕ್ತಾಯಗೊಂಡ ಕಾರ್ಯಕ್ರಮಗಳನ್ನು ಸಭೆಯಲ್ಲಿ **ಕಡ್ಡಾಯವಾಗಿ** ಮಂಡಿಸಬೇಕು.
- ಕ್ಷೇತ್ರ ಪ್ರಯೋಗಗಳ ಪ್ರಸ್ತಾವನೆಗಳನ್ನು, ಅಭಿವೃದ್ಧಿಗೊಳಿಸಿರುವ ತಾಂತ್ರಿಕತೆಗಳನ್ನು ಮತ್ತು ಬಿಡುಗಡೆಗೆ ಸಿದ್ಧವಾಗಿರುವ ನೂತನ ತಳಿಗಳ ವಿವರವಾದ ಪ್ರಸ್ತಾವನೆಯನ್ನು **ಕಡ್ಡಾಯವಾಗಿ ಕನ್ನಡದಲ್ಲಿ** ಮಾಹಿತಿಯನ್ನು ಕಳುಹಿಸಲು ಹಾಗೂ ಸಂಬಂಧಿಸಿದ ವಿಜ್ಞಾನಿಗಳು ಕಾರ್ಯಾಗಾರದಲ್ಲಿ ಶ್ರವಣ ದೃಶ್ಯ ಮಾಹಿತಿ ರೂಪದಲ್ಲಿ (ppt) ಮಂಡಿಸಬೇಕು.
- ಎಲ್ಲಾ ವಿಜ್ಞಾನಿಗಳು ಶಿಫಾರಸ್ಸುಗೊಂಡ ನಿಗದಿತ ಮುಂದುವರೆಯುವ ಸಂಶೋಧನಾ ಕಾರ್ಯಕ್ರಮಗಳು ಮತ್ತು ಮುಕ್ತಾಯಗೊಂಡ ಕಾರ್ಯಕ್ರಮಗಳ ಮಾಹಿತಿಯನ್ನು ಲಗತ್ತಿಸಿರುವ ನಿಗದಿತ ನಮೂನೆ ಹಾಗೂ ಭಾಷಾ ರೂಪದಲ್ಲಿ (**English: Times New Roman, Font Size: 12, Paper Size-A4)** ಮುದ್ರಿತ ಹಾಗೂ ವಿದ್ಯುನ್ಮಾನ ಪ್ರತಿಗಳನ್ನು (**ಮಿಂಚಂಚೆ: *druasbdocumentation@gmail.com*** ಸಹ ಸಂಶೋಧನಾ ನಿರ್ದೇಶಕರ ಕಛೇರಿಗೆ ದಿನಾಂಕ:**10-03-2023 ರೊಳಗೆ** ಕಡ್ಡಾಯವಾಗಿ ಸಲ್ಲಿಸಲು ಕ್ರಮವಹಿಸುವುದು. ನಂತರದಲ್ಲಿ ಕಳುಹಿಸಿದ ಮಾಹಿತಿಗಳನ್ನು ಪುಸ್ತಕದಲ್ಲಿ ಸೇರಿಸಲು ಅವಕಾಶವಿರುವುದಿಲ್ಲ.
- ವಲಯ ಸಂಶೋಧನಾ ಹಾಗೂ ವಿಸ್ತರಣಾ ಕಾರ್ಯಕ್ರಮಗಳ ವಾರ್ಷಿಕ ಕಾರ್ಯಾಗಾರದ ನಿಮಿತ್ತ ಹೊರ ತರಲಾಗುವ ಪುಸ್ತಕದಲ್ಲಿ ಸೇರ್ಪಡಿಸಿದ **ಮಾಹಿತಿಯನ್ನು ಮಾತ್ರ ಕಾರ್ಯಾಗಾರದಲ್ಲಿ ಮಂಡಿಸಲು ಅನುಮತಿ ನೀಡಲಾಗುವುದು**. ಯಾವುದೇ ವೃತ್ತಿ ಅಥವಾ ಇತರೆ ಬಡ್ತಿಗಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕಾರ್ಯಾಗಾರದ ವರದಿಯಲ್ಲಿ ಲಭ್ಯವಿರುವ ಮಾಹಿತಿಯ ಆಧಾರದ ಮೇರೆಗೆ ಬಿಡುಗಡೆಗೊಳಿಸಿದ ನೂತನ ತಳಿಗಳಿಗೆ / ತಂತ್ರಜ್ಞಾನಗಳಿಗೆ ಮಾತ್ರ ದೃಢೀಕರಣ ಪತ್ರವನ್ನು ನೀಡಲಾಗುವುದು.

ದಯಮಾಡಿ ತಿಳಿಸಿರುವ / ನಿಗದಿತಗೊಳಿಸಿರುವ ದಿನಾಂಕ ಹಾಗೂ ನಮೂನೆಯನ್ನು ಪಾಲಿಸಲು ಮತ್ತೊಮ್ಮೆ ತಿಳಿಸಲಾಗಿದೆ.

H.S.

ಸಹ ಸಂಶೋಧನಾ ನಿರ್ದೇಶಕರು (ಕೇಂದ್ರ ಸ್ಥಾನ)

ಸಹ ಸಂಶೋಧನಾ ನಿರ್ದೇಶಕರು (ಕೇಂದ್ರ ಸ್ಥಾನ)
ಸಂಶೋಧನಾ ನಿರ್ದೇಶನಾಲಯ
ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು-560065

**ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಲಾಗಿದೆ,**

1. ಶಿಕ್ಷಣ ನಿರ್ದೇಶಕರು, ಕೃ.ವಿ.ವಿ., ಜಿಕೆವಿಕೆ
2. ಸಂಶೋಧನಾ ನಿರ್ದೇಶಕರು, ಕೃ.ವಿ.ವಿ., ಜಿಕೆವಿಕೆ
3. ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ., ಜಿಕೆವಿಕೆ
4. ಡೀನ್ (ಸ್ನಾತಕೋತ್ತರ), ಕೃ.ವಿ.ವಿ., ಜಿಕೆವಿಕೆ
5. ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ಜಿಕೆವಿಕೆ
6. ಡೀನ್ (ರೇಷ್ಮೆ ಕೃಷಿ), ರೇಷ್ಮೆ ಕೃಷಿ ಕಾಲೇಜು, ಚಿಂತಾಮಣಿ
7. ಸಹ ವಿಸ್ತರಣಾ ನಿರ್ದೇಶಕರು (ಕೇಂದ್ರ ಸ್ಥಾನ), ಜಿಕೆವಿಕೆ
8. ವಿಶೇಷ ಅಧಿಕಾರಿಗಳು, ಕೃಷಿ ಇಂಜಿನಿಯರಿಂಗ್ ಕಾಲೇಜು, ಜಿಕೆವಿಕೆ
9. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಛೇರಿ, ಕೃ.ವಿ.ವಿ., ಜಿಕೆವಿಕೆ

**ಪ್ರತಿಯನ್ನು ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ,**

1. ಜಂಟಿ ಕೃಷಿ ನಿರ್ದೇಶಕರು (ಕ್ಷೇತ್ರ ಪ್ರಯೋಗ), ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560 001
2. ಜಂಟಿ ಕೃಷಿ ನಿರ್ದೇಶಕರು (ಪರಿಕರ), ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು – 560 001
3. ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ತುಮಕೂರು / ರಾಮನಗರ / ಕೋಲಾರ / ಬೆಂಗಳೂರು / ಚಿಕ್ಕಬಳ್ಳಾಪುರ / ಬೆಂಗಳೂರು (ಗ್ರಾ) ಜಿಲ್ಲೆಗಳು
4. ವಿಶ್ವವಿದ್ಯಾನಿಲಯದ ವಿಭಾಗಗಳ ಮುಖ್ಯಸ್ಥರುಗಳು (University Heads)
5. ವಲಯ–5 ರ ಎಲ್ಲಾ ಸಂಶೋಧನಾ ಪ್ರಾಯೋಜನೆಯ ಮುಖ್ಯಸ್ಥರು
6. ಹಿರಿಯ ಕ್ಷೇತ್ರ ಅಧೀಕ್ಷಕರು, ವ.ಕೃ.ಸಂ.ಕೇ., ಜಿಕೆವಿಕೆ